**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆ- 816/2021**

ಪ್ರಾಸಾಃ- 10 ಚಾಸಾಃ- 24

| | | |
|---|---|---|
| ಸಾಕ್ಷಿಯ ಹೆಸರು | : | ಅಂಬರೀಷ್ |
| ತಂದೆ/ಗಂಡನ ಹೆಸರು | : | ಮುನಿಸ್ವಾಮಿ |
| ವಯಸ್ಸು | : | 36 ವರ್ಷ |
| ವೃತ್ತಿ | : | ಆಟೋ ಚಾಲಕ |
| ವಾಸಸ್ಥಳ | : | ಬಳ್ಳಾರಿ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 7.11.2023

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ಸಾಕ್ಷಿಗೆ ವಿ ಸಿ ಮುಖಾಂತರ 1 ಮತ್ತು 2 ನೇ ಆರೋಪಿತರನ್ನು ತೋರಿಸಲಾಗಿ ನೋಡಿ ಗುರುತಿಸಿರುವುದಿಲ್ಲ . ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿರುವುದಿಲ್ಲ . ನನಗೆ 1 ನೇ ಆರೋಪಿ ಬಗ್ಗೆ ಮಾಹಿತಿ ಇಲ್ಲ .

ನನಗೆ 1 ನೇ ಆರೋಪಿ ಎರಡು ಬಂಗಾರದ ಆಭರಣಗಳನ್ನು ನೀಡಿ ತನಗೆ ಹಣದ ಅವಶ್ಯಕತೆ ಇದ್ದ ಬಗ್ಗೆ ಹೇಳಿಲ್ಲ ಮತ್ತು ನಾನು ಸದರಿ ಆಭರಣಗಳನ್ನು ಕೊಟ್ಟು ಯಾವುದೇ ಬ್ಯಾಂಕಿನಲ್ಲಿ ಹಣ ಪಡೆದು ಆತನಿಗೆ ಹಣ ಕೊಟ್ಟಿಲ್ಲ . ಪೋಲೀಸರು ನನ್ನನ್ನು ಯಾವುದೇ ಬ್ಯಾಂಕಿನ ಹತ್ತಿರ ಕರೆಸಿ ಪಂಚನಾಮೆ ಗಳನ್ನು ಮಾಡಿಲ್ಲ . ಸಾಕ್ಷಿಗೆ ಫೆಡ್ ಬಾಂಕ್ ಹತ್ತಿರ ಮಾಡಿದ ಎರಡು ಪಂಚನಾಮೆಗಳನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು , ದಿಃ 16-6-2021 ರಂದು ಮಾಡಿದ ಪಂಚನಾಮೆಯನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದ್ದು ಅದರಲ್ಲಿನ ಸಾಕ್ಷಿದಾರರ ಸಹಿಯು ನಿಪಿ-8(ಬಿ) ಎಂದು ಗುರುತಿಸಲಾಯಿತು . ನಿಪಿ- 8 ರ ಕಾಲಕ್ಕೆ ತೆಗೆದ ಪೋಟೋಗಳನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ತನ್ನ ಭಾವಚಿತ್ರ ಇರುವ ಬಗ್ಗೆ ನೊಡೀ ಗುರುಸಿತಿದ್ದು ಸದರಿ ಪೋಟೋಗಳನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದ್ದು ಅವುಗಳನ್ನು ಎಲ್ಲಿ ಮತ್ತು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಗೊತ್ತಿಲ್ಲ ಮತ್ತು

ಆರೋಪಿ 1 ಅಲ್ಲಿ ಯಾಕ್ಕೆ ಇದ್ದ ಮತ್ತು ಪೋಟೋದಲ್ಲಿ ಇರುವ ಆಭರಣಗಳನ್ನು ಯಾರವು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಫೆಡ್ ಬ್ಯಾಂಕ್ ನಲ್ಲಿ ಆಭರಣಗಳನ್ನು ಜಪ್ತು ಮಾಡಿದ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ-43 ಎಂದು ಅದರಲ್ಲಿನ ಸಾಕ್ಷಿದಾರರ ಸಹಿಯನ್ನು ನಿಪಿ-43(ಎ) ಎಂದು ಗುರುತಿಸಲಾಯಿತು . ನಿಪಿ-43 ರಲ್ಲಿ ಏನು ಬರೆದಿದೆ ಗೊತ್ತಿಲ್ಲ . ಸಾಕ್ಷಿಗೆ ನಿಪಿ-43 ರ ಕಾಲಕ್ಕೆ ತೆಗೆದ 6 ಪೋಟೋಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-44 ಎಂದು ಗುರುತಿಸಲಾಯಿತು. ಸದರಿ ಪೋಟೋಗಳಲ್ಲಿ ಇರುವ ಬಂಗಾರದ ಆಭರಣಗಳು ಯಾರಿಗೆ ಸೇರಿದ್ದವು ಮತ್ತು ಪೋಟೋಗಳನ್ನು ಎಲ್ಲಿ ತೆಗೆಯಲಾಗಿತ್ತು ಗೊತ್ತಿಲ್ಲ ಎಂದು ನುಡಿಯುತ್ತಾರೆ .

ನನ್ನದು ಫೆಡ್ ಬ್ಯಾಂಕ್ , ಬಳ್ಳಾರಿಯಲ್ಲಿ ಯಾವುದೆ ಖಾತೆ ಇರುವುದಿಲ್ಲ ಮತ್ತು ನಾನು ಸದರಿ ಬಾಂಕ್ ನಲ್ಲಿ ಯಾವುದೇ ಬಂಗಾರದ ಸಾಲ ಪಡೆದಿಲ್ಲ . ಸಾಕ್ಷಿಗೆ ಫೆಡ್ ಬ್ಯಾಂಕ್ ನ ರಿಸಿಪ್ಟ್ ವೋಚರ್ ಗಳನ್ನು ತೋರಿಸಲಾಗಿ ಅದರಲ್ಲಿನ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸದರಿ 3 ರಿಸಿಪ್ಟ್ ವೋಚರ್ ಗಳನ್ನು ಕ್ರಮವಾಗಿ ನಿಪಿ-45 ರಿಂದ ನಿಪಿ-47 ಎಂದು ಅದರಲ್ಲಿನ ಸಾಕ್ಷಿಯ ಸಹಿಗಳನುನ ಕ್ರಮವಾಗಿ ನಿಪಿ-45(ಎ) ರಿಂದ ನಿಪಿ-47 (ಎ) ಎಂದು ಗುರುತಿಸಲಾಯಿತು . ಸಾಕ್ಷಿಗೆ ಫೆಡ್ ಬ್ಯಾಂಕ್ ನ ಕಸ್ಟಮರ್ ಕಾಫಿಯ ಜಿರಾಕ್ಸ್ ಪ್ರತಿಯನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಸದರಿ ಮೇಲೆ ಹೇಳಿದ ನಿಪಿ-45 ರಿಂದ 47 ಮತ್ತು ಕಸ್ಟಮರ್ ಕಾಫಿ ಯಾವ ಕಾರಣಕ್ಕಾಗಿ ಪೊಲಿಸೀರು ಜಪ್ತು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ . ನಾನು ಪೊಲೀಸರು ಮುಂದೆ ಯಾವುದೇ ಹೇಳಿಕೆ ಮತ್ತು ಮರು ಹೇಳಿಕೆಗಳನ್ನು ನೀಡಿರುವುದಿಲ್ಲ .

ಆರೋಪಿತರು ಮೃತ ಜಯಮ್ಮ ಮತ್ತು ರಾಮಲಕ್ಷ್ಮಿರವರನ್ನು ಹೊಡೆದು ಕೊಲೆ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ .

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸ ಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು , ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ ).

ಪಾಟೀ ಸವಾಲುಃ ಅಭಿಯೋಜಕರವರಿಂದಃ

ದಿನಾಂಕಃ 16-6-2021 ರಂದು ಪೊಲೀಸರು ಚಾಸಾ 1 ಆರೋಪಿ 1 ಹಾಗೂ ಚಾಸಾ 6 ಮತ್ತು 7 ರವರ ಸಮಕ್ಷಮ ಪೊಲಿಸೀರು ಆರೋಪಿ ತೋರಿಸಿದಂತೆ ಮತ್ತು ನಮ್ಮ ಸಮಕ್ಷಮದಲ್ಲಿ

ಆರೋಪಿ ನನಗೆ ನೀಡಿದ್ದ ಬಂಗಾರದ ಆಭರಣಗಳನ್ನು ಒತ್ತೆ ಇಟ್ಟ ಬ್ಯಾಂಕ್ ನ್ನು ತೋರಿಸುವ ಸಲುವಾಗಿ ಫೆಡ್ ಬಾಂಕ್ ಬಳ್ಳಾರಿಯಲ್ಲಿ ಪಂಚನಾಮೆ ಮಾಡಿದ್ದರು ಎಂದರೆ ಸರಿಯಲ್ಲ . ಆ ಸಮಯದಲ್ಲಿ ನಾನು ಬಂಗಾರದ ಆಭರಣಗಳನ್ನು ಒತ್ತೆ ಇಟ್ಟ ಬಗ್ಗೆ ಪೋಲೀಸರಿಗೆ ತಿಳಿಸಿ ಪೋಲಿಸೀರು ಸದರಿ ಬ್ಯಾಂಕಿನ ಮ್ಯಾನೇಜರ್ ಚಾಸಾ 34 ರವರಿಗೆ ಆಭರಣಗಳನುನ ತೋರಿಸಲು ಕೋರಿದಂತೆ ನಮ್ಮೆಲ್ಲರ ಸಮಕ್ಷಮ 1 ನೇ ಆರೋಪಿ ನನಗೆ ನೀಡಿದ ಆಭರಣಗಳನ್ನು ನಾನು ಒತ್ತೆ ಇಟ್ಟವುಗಳನ್ನು ಚಾಸಾ 34 ರವರು ಹಾಜರು ಮಾಡಿ ತೋರಿಸಿದರು ಮತ್ತು ಆ ಬಗ್ಗೆ ಚಾಸಾ 1 ಸದರಿ ಆಭರಣಗಳು ನನ್ನ ತಾಯಿ ಜಯಮ್ಮ ಮತ್ತು ರಾಮಲಕ್ಷ್ಮಿ ರವರಿಗೆ ಸಂಬಂಧಿಸಿದ್ದವು ಎಂದು ನೋಡಿ ಗುರುತಿಸಿದಂತೆ ಈಗ ಓದಿ ಹೇಳಿದ ನಿಪಿ-8 ರಂತೆ ಪಂಚನಾಮೆಯನ್ನು ಮಾಡಿ ನಿಪಿ-9 ರಂತೆ ಪೋಟೋಗಳನ್ನು ತೆಗೆದಿದ್ದರು ಎಂದರೆ ಸರಿಯಲ್ಲ .

ದಿನಾಂಕಃ 1-7-2021 ರಂದು ಪೊಲಿಸೀರು ಮತ್ತು ನನ್ನನ್ನು ಫೆಡ್ ಬ್ಯಾಂಕ್ ಗೆ ಕರೇಸಿ ನಾನು ಈ ಹಿಂದೆ ಒತ್ತೆ ಇಟ್ಟಿದ್ದ ಆರೋಪಿ 1 ಇಟ್ಟಿದ ಬಂಗಾರದ ಆಭರಣಗಳನ್ನು ಬ್ಯಾಂಕ್ ಮ್ಯಾನೇಜರ್ ಹಾಜರು ಪಡಿಸಿದಂತೆ ಎರಡೂ ಆಭರಣಗಳನ್ನು ಜಪ್ತು ಮಾಡಿ ಈಗ ಓದಿ ಹೇಳಿದ ನಿಪಿ-43 ರಂತೆ ಪಂಚನಾಮೆ ಮಾಡಿದ್ದರು ಎಂದರೆ ಸರಿಯಲ್ಲ ಮತ್ತು ಆ ಸಮಯದಲ್ಲಿ ನಿಪಿ-44 ರಂತೆ ಪೋಟೋಗಳನ್ನು ತೆಗೆದಿದ್ದರು ಎಂದರೆ ಸರಿಯಲ್ಲ ಮತ್ತು ಆ ಸಮಯದಲ್ಲಿ ನನ್ನ ಬಂಗಾರದ ಸಾಲದ ವ್ಯವಹಾರ ಕುರಿತಂತೆ ನಿಪಿ-45 ರಿಂದ 47 ದಾಖಲೆಗಳನ್ನು ಮತ್ತು ನಾನು ಒತ್ತೆ ಇಟ್ಟ ದಿನಾಂಕದ ಕಸ್ಟಮರ್ ಕಾಫಿಯನ್ನು ನಿಪಿ-43 ರ ಕಾಲಕ್ಕೆ ಬ್ಯಾಂಕ್ ನಿಂದ ಪಡೆದುಕೊಂಡಿದ್ದೆನು ಎಂದರೆ ಸರಿಯಲ್ಲ . ನಿಪಿ-45 ರಿಂದ 47 ದಾಖಲೆಗಳು ನನ್ನ ಯಾವ ಖಾತೆಗೆ ಸಂಬಂಧಿಸಿದ್ದವು ಎಂದು ಹೇಳಲು ಆಗುವುದಿಲ್ಲ .

ನಾನು ಘಟನೆ ಕುರಿತಂತೆ ಆರೋಪಿತರು ಜಯಮ್ಮ ಮತ್ತು ರಾಮಲಕ್ಷ್ಮಿರವರನ್ನು ಅಪಹರಿಸಿ ಕೊಲೆ ಮಾಡಿ ಅವರ ಮೈ ಮೇಲಿದ್ದ ಪೋಟೋದಲ್ಲಿರುವ ಬಂಗಾರದ ಆಭರಣಗಳನ್ನು ತೆಗೆದುಕೊಂಡು ಕಾಲುವೆಗೆ ಬೀಸಾಡಿದ ಬಗ್ಗೆ ಈಗ ಓದಿ ಹೇಳಿದ ನಿಪಿ- 48 ರಂತೆ ದಿನಾಂಕಃ 1-7-2021 ರಂದು ಹೇಳಿಕೆಯನ್ನು ಮತ್ತು ದಿನಾಂಕಃ 10-8-2021 ರಂದು ಈಗ ಓದಿ ಹೇಳಿದ ನಿಪಿ-48 ರಂತೆ ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ .

1 ನೇ ಆರೋಪಿ ನನಗೆ ಸಂಬ್ಧಧಿಕನಾಗಬೇಕು ಎಂದರೆ ಸರಿಯಲ್ಲ . ನಾನು 1 ಆರೋಪಿ ಕೊಟ್ಟ ಬಂಗಾರದ ಆಭರಣಗಳನ್ನು ಫೆಡ್ ಬ್ಯಾಂಕಿ ನಲ್ಲಿ ಒತ್ತೆ ಇಟ್ಟು ಸುಮಾರು ರೂ. 2,85,906 ಗಳನ್ನು ಪಡೆದುಕೊಂಡು ಆರೋಪಿಗೆ ನೀಡಿದ್ದರೂ ಸಹ ನಂತರ ಆರೊಪಿಪಿತರು ಜಯಮ್ಮ

ಮತ್ತು ರಾಮಲಕ್ಷ್ಮಿರವರನ್ನು ಕೊಲೆ ಮಾಡಿ ಆಭರಣ ತೆಗೆದುಕೊಂಡಿರುವ ವಿಚಾರ ಕೇಳಿ ತಿಳಿದುಕೊಂಡಿದ್ದರೂ ಸಹ ಮತ್ತು ನನ್ನ ಖಾತೆ ಫೆಡ್ ಬ್ಯಾಂಕ್ ನಲ್ಲಿ ಇದ್ದು ಆ ಬಗ್ಗೆ ಪಂಚನಾಮೆಗಳನ್ನು ಮಾಡಿ ಆಭರಣ ಮತ್ತು ದಾಖಲೆಗಳನ್ನು ಜಪ್ತು ಮಾಡಿದ್ದರೂ ಸಹ 1 ನೇ ಆರೋಪಿ ನಮ್ಮ ಸಂಬಂಧಿಯಾಗಿದ್ದರಿಂದ ಆತನಿಗೆ ಅನುಕೂಲವಾಗಲು ಹಾಗೂ ಉಳಿದ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್ ಆರ್ ಎಸ್ ವಕೀಲರು ಹಾಜರಿದ್ದು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ .

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.